# ಚಿನ್ನದ ಬೀಡು



ನೆಲದಾಳದಲ್ಲಿನ ಹಳದಿ ಲೋಹವನ್ನು ಮೊಗೆ ಮೊಗೆದು ಕೊಟ್ಟ 'ಕೋಲಾರ ಚಿನ್ನದ ಗಣಿಗಳು' ಕೆಲಸ ಬಂದ್ ಮಾಡಿ ಎರಡು ದಶಕಗಳೇ ಕಳೆದುಹೋಗಿವೆ. ಆದರೆ 'ಕೆಜಿಎಫ್'ನ ಚಿನ್ನದ ಕಥೆಗಳು ಜನರ ನೆನಪಿನಲ್ಲಿ ಅಪ್ಪಟ ಬಂಗಾರದಂತೆ ಮಿರುಗುತ್ತಲೇ ಇವೆ. ಎರಡು ಶತಮಾನಕ್ಕೂ ಹೆಚ್ಚು ಕಾಲ ಭಾರತದಲ್ಲಿ ಬಂಗಾರದ ಹೊಳೆ ಹರಿಸಿದ ಕೆ.ಜಿ.ಎಫ್. ಈಗಲೂ ನೇಪಥ್ಯಕ್ಕೆ ಸರಿದಿಲ್ಲ. ಭಾರತದಲ್ಲಿ ಬಂಗಾರದ ಹೆಸರು ಬಂದರೆ ಕೆ.ಜಿ. ಎಫ್. ಕಡೆ ತೋರುತ್ತಿದ್ದ ಬೆರಳು ಇನ್ನೂ ಮಡಿಸಿಲ್ಲ. ಚಿನ್ನದ ನಾಡೆಂದು ಕರೆಸಿಕೊಳ್ಳುತ್ತಿದ್ದ ಕನ್ನಡ ನಾಡಿಗೆ ಈ ವಿಶೇಷಣ ತಳಕು ಹಾಕಿಕೊಂಡಿದ್ದು ಕೆ.ಜಿ.ಎಫ್.ನಿಂದಲೇ. ಈಗಲೂ ಭಾರತದಲ್ಲಿ ಚಿನ್ನ ಉತ್ಪಾದಿಸುವ 'ಹಟ್ಟಿ' ಗಣಿಗಳು ಇರುವುದು ಕರ್ನಾಟಕದಲ್ಲಿಯೇ.

ಒಂದು ಸಾವಿರ ವರ್ಷಗಳಿಗೂ ಹಿಂದಿನಿಂದಲೂ ಕೋಲಾರ ಪ್ರಾಂತ್ಯದಲ್ಲಿ ಚಿನ್ನದ ಗಣಿಗಾರಿಕೆ ಇತ್ತೆಂಬ ಅಂದಾಜಿದ್ದರೂ ಅದಕ್ಕೆ ಅಧಿಕೃತ ಮೊಹರು ಬಿದ್ದಿದ್ದು 17ನೇ ಶತಮಾನದ ಆಸುಪಾಸಿನಲ್ಲಿ. ನೆಲದೊಳಗಿನ ಚಿನ್ನದ ಅದಿರನ್ನು ವ್ಯವಸ್ಥಿತವಾಗಿ ಹೊರಗೆ ತೆಗೆಯುವುದು ಶುರುವಾಗಿದ್ದು 18ನೇ ಶತಮಾನದ ಕೊನೆಗೆ.

ಕೋಲಾರ ಸೀಮೆಯಲ್ಲಿ ಚಿನ್ನ ಸಿಗುವುದೆಂಬ ಗುಸುಗುಸು ಬಹು ಹಿಂದಿನಿಂದಲೂ ಕೇಳಿಬರುತ್ತಿತ್ತು. ಚಿನ್ನದ ನಿಕ್ಷೇಪಗಳು ಎಲ್ಲಿವೆ ಎಂಬ ಮಾಹಿತಿ ಟಿಪ್ಪು ಸುಲ್ತಾನ್‌ಗೆ ಗೊತ್ತಿದೆ ಎಂಬ ಗುಮಾನಿ ಬ್ರಿಟಿಷರಿಗೆ ಇತ್ತು. ಟಿಪ್ಪು ಸುಲ್ತಾನ್‌ನಿಂದ ಹೊನ್ನು ಸಿಗುವ ವಿವರ ಪಡೆಯಲು ಬ್ರಿಟಿಷರು ವಿಫಲ ಪ್ರಯತ್ನಗಳನ್ನೂ ನಡೆಸಿದ್ದರು. ಮೈಸೂರು–ಬ್ರಿಟಿಷ್ ಯುದ್ಧದಲ್ಲಿ ಟಿಪ್ಪು ಮರಣವನ್ನಪ್ಪಿದ ಬಳಿಕ, ಆ ಪ್ರಾಂತ್ಯದ ಆಡಳಿತ ಕೈವಶ ಮಾಡಿಕೊಂಡ ಬ್ರಿಟಿಷರು ಹೆಚ್ಚು ಕಾಲ ಸುಮ್ಮನಿರಲಿಲ್ಲ. ಕೋಲಾರ ಪರಿಸರದಲ್ಲಿ ಭೌಗೋಳಿಕ ಸಮೀಕ್ಷೆಗೆ ಮುಂದಾದರು. ಜಾನ್ ವಾರೆನ್ ಎಂಬ ಬ್ರಿಟಿಷ್ ಸೇನಾಧಿಕಾರಿಯನ್ನು ಈ ಕೆಲಸಕ್ಕಾಗಿ ನಿಯುಕ್ತಿ ಮಾಡಿದರು. ಚಿನ್ನದ ವಾಸನೆಯನ್ನು ವಾರೆನ್ ಮೂಗಿಗೆ ಹಚ್ಚಲು ಮರೆಯಲಿಲ್ಲ.

## ವಾರೆನ್ ಹುಡುಕಾಟ

ಕುದುರೆ ಹತ್ತಿದ ವಾರೆನ್ ಸಹಚರರು ಚಿನ್ನದ ಮಾಹಿತಿಗಳನ್ನು ಕಲೆಹಾಕಲು ಶುರುವಿಟ್ಟರು. ತಮಿಳುನಾಡು–ಆಂಧ್ರಪ್ರದೇಶಗಳಿಂದ ಸುತ್ತುವರೆದಿದ್ದ ಈಗಿನ ಬಂಗಾರಪೇಟೆಯಿಂದ 8–10 ಕಿಲೋಮೀಟರ್ ದೂರದಲ್ಲಿ ಸಣ್ಣ ಪ್ರಮಾಣದ ಗಣಿಗಾರಿಕೆಯನ್ನು ಸ್ಥಳೀಯರು ಮಾಡುತ್ತಾರೆಂದೂ, ಅಲ್ಲಿ ಬಂಗಾರ ಸಿಗುತ್ತಿದೆ ಎನ್ನುವ ಸುದ್ದಿ ವಾರೆನ್‌ಗೆ ಮುಟ್ಟಿತು. ತಡಮಾಡದೆ ಕುದುರೆ ಏರಿದ ವಾರೆನ್, ಬಹುಗೋಪ್ಯವಾಗಿ ಚಿನ್ನದ ಮಾಹಿತಿ ಜಾಲಾಡಲು ಪ್ರಾರಂಭಿಸಿದ. ಹಳ್ಳಿಗರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅವನು ಸ್ವಲ್ಪ ಸಮಯದಲ್ಲಿಯೇ ಆ ಪ್ರದೇಶದಲ್ಲಿ ಚಿನ್ನ ಸಿಗುವ ಖಚಿತ ಮಾಹಿತಿಯನ್ನು ಪಡೆದ. ಸ್ವಲ್ಪ ಆಳದಲ್ಲಿ ಗಣಿಗಾರಿಕೆ ಮಾಡಿ, ಅದಿರು ಸೋಸಿ ಚಿನ್ನ ಪಡೆಯುವ ಜನರನ್ನೂ ಭೇಟಿ ಮಾಡಿದ ಆತ, ಲಭ್ಯ ಮಾಹಿತಿಯನ್ನು ಸಂಗ್ರಹಿಸಿ ಸುದೀರ್ಘ ವರದಿಯನ್ನು 'ಏಷ್ಯಾಟಿಕ್ ಜರ್ನಲ್'ನಲ್ಲಿ ಪ್ರಕಟಿಸಿದ. ಎರ್ರಕೊಂಡ ಸಮೀಪದ ಮಾರಿಕುಪ್ಪಂಗೆ ಹೋಗಿ ಸ್ಥಳೀಯರ ನೆರವಿನಿಂದ ಸ್ಥಳೀಯ ಮಾದರಿಯಲ್ಲೇ ಗಣಿ ತೆಗೆದು ಚಿನ್ನ ಪಡೆಯುವ ಪ್ರಯೋಗಗಳನ್ನೂ ಕೈಗೊಂಡ.

ಮಾರಿಕುಪ್ಪಂ ಆಸುಪಾಸಿನಲ್ಲಿ ನಡೆದಿದ್ದ ಗಣಿಗಾರಿಕೆಗೆ ಹೆಚ್ಚಿನ ಹಣ–ಶ್ರಮ ಬೇಕಾಗಿತ್ತು. ಸರ್ಕಾರವೇ ಅಲ್ಲಿ ಗಣಿಗಾರಿಕೆ ಮಾಡಬಹುದು ಎಂಬ ಅಭಿಪ್ರಾಯವನ್ನು ವಾರೆನ್ ವ್ಯಕ್ತಪಡಿಸಿದ. ಆದರೆ, ಅವನ ಮಾತಿಗೆ ಸರ್ಕಾರ ಕಿವಿಗೊಡಲಿಲ್ಲ. 'ಚಿನ್ನ ಸಿಗುತ್ತದೆ' ಎಂಬ ವಾರೆನ್ ಮಾತು ಗಾಳಿಯಲ್ಲಿ ತೇಲಾಡಿ ಸುಮಾರು ಜನರನ್ನು ತಲುಪಿದ್ದೂ ಆಯಿತು. ನೆಲವನ್ನು ಹೆಚ್ಚು ತೋಡದೆ ಅದಿರು ಸಂಗ್ರಹಿಸಿ ಶುದ್ಧ ಚಿನ್ನ ಪಡೆಯಬಹುದೆಂಬ ಆಸೆಯಲ್ಲಿ ಸ್ಥಳೀಯರೆಲ್ಲ ಒಂದು ಕೈ ನೋಡಲು ಪ್ರಾರಂಭಿಸಿದರು. ಆದರೆ ಅದು ಅಪಾಯದ ಕಾರ್ಯ ಎಂಬುದು ಅರಿವಾಗಲು ಹೆಚ್ಚಿನ ಸಮಯ ಬೇಕಾಗಲಿಲ್ಲ.

ಕದ್ದುಮುಚ್ಚಿ ಗಣಿಗಾರಿಕೆಯಲ್ಲಿ ತೊಡಗುವ ಪ್ರವೃತ್ತಿ ಹೆಚ್ಚಾಯಿತು. ಸರ್ಕಾರದ ಸ್ವತ್ತು ಪರಭಾರೆ ಮಾಡುವುದು ಹಾಗೂ ಆಗಾಗ ನಡೆಯುವ ಅವಘಡಗಳು ಸರ್ಕಾರಕ್ಕೆ ತಲೆನೋವು ತಂದಾಗ ಎಚ್ಚೆತ್ತುಕೊಂಡ ಮೈಸೂರು ಸರ್ಕಾರ, ಈ ಭಾಗದಲ್ಲಿ ಗಣಿಗಾರಿಕೆ ಮಾಡಬಾರದೆಂಬ ಆದೇಶವನ್ನು ಹೊರಡಿಸಬೇಕಾಯಿತು.

ಶ್ರೀರಂಗಪಟ್ಟಣ ಯುದ್ಧದ ಬಳಿಕ ಬೆಂಗಳೂರನ್ನು ತಮ್ಮ ಕೇಂದ್ರಸ್ಥಳವಾಗಿ ಆಯ್ದುಕೊಂಡ ಬ್ರಿಟಿಷರು, ನಗರವನ್ನು ಸುಸಜ್ಜಿತವಾಗಿ ಮಾರ್ಪಡಿಸಿಕೊಂಡರು. ವರ್ಷದುದ್ದಕ್ಕೂ ತಂಪಾದ ವಾತಾವರಣವಿದ್ದ ಬೆಂಗಳೂರು, ಬ್ರಿಟಿಷ್ ಸೇನಾಧಿಕಾರಿಗಳ ನೆಚ್ಚಿನ ತಾಣವಾಯಿತು. ಇಂಗ್ಲೆಂಡ್ ಪರವಾಗಿ ಯುದ್ಧಗಳಲ್ಲಿ ಪಾಲ್ಗೊಂಡು, ಯುದ್ಧಾನಂತರ ವಿಶ್ರಾಂತಿಗಾಗಿ ಬೆಂಗಳೂರನ್ನು ಆಯ್ಕೆ ಮಾಡಿಕೊಳ್ಳುವವರ ಸಂಖ್ಯೆಯೂ ಆಗ ಹೆಚ್ಚಿತ್ತು. ಇಂತಹ ಸೇನಾಧಿಕಾರಿಗಳಲ್ಲಿ ಐರ್ಲೆಂಡಿನ ಮೈಖಲ್ ಲ್ಯಾವೆಲ್ಲೆ ಒಬ್ಬರಾಗಿದ್ದರು.

## ಚಾಣಾಕ್ಷ ಲ್ಯಾವೆಲ್ಲೆ

ನ್ಯೂಜಿಲೆಂಡ್‌ನ ಯುದ್ಧದಲ್ಲಿ ಭಾಗವಹಿಸಿದ ಲ್ಯಾವೆಲ್ಲೆ ಅಲ್ಲಿ ಚಿನ್ನದ ಗಣಿಕಾರಿಕೆಯಲ್ಲಿಯೂ ಪರಿಣತಿ ಸಾಧಿಸಿದ್ದ. ಬೆಂಗಳೂರಿನಲ್ಲಿ ನೆಲೆಸಲು ಬಂದ ಈತ ಸುಮ್ಮನೆ ಕೂಡುವ ಆಸಾಮಿ ಆಗಿರಲಿಲ್ಲ.

ಚಿನ್ನದ ಗಣಿಗಾರಿಕೆ ಬಗ್ಗೆ ಅರಿತಿದ್ದ ಲ್ಯಾವೆಲ್ಲೆಗೆ, ಹಿಂದೆ ಜಾನ್ ವಾರೆನ್ ಚಿನ್ನಕ್ಕಾಗಿ ಮಾಡಿದ್ದ ಪ್ರಯತ್ನಗಳೆಲ್ಲ ತಿಳಿಯಿತು. ಮಾರಿಕುಪ್ಪಂ ಕಡೆ ಎಡತಾಕಿದ ಲ್ಯಾವೆಲ್ಲೆ ಚಿನ್ನದ ಮಾಹಿತಿಯನ್ನು ಕಲೆಹಾಕಿದ. ಅಲ್ಲಿ ಚಿನ್ನದ ನಿಕ್ಷೇಪಗಳಿರುವುದು ಅವನಿಗೆ ಖಚಿತವಾಯಿತು. ಆದರೆ, ಅವನು ಮೈಸೂರು ಸರ್ಕಾರಕ್ಕೆ ಅರ್ಜಿ ಸಲ್ಲಿಸಿದ್ದು ಕಲ್ಲಿದ್ದಲು ಗಣಿಗಾರಿಕೆಯ ಪರವಾನಗಿಗೆ. ಸಹಜವಾಗಿ ಸರ್ಕಾರಕ್ಕೆ ಲ್ಯಾವೆಲ್ಲೆ ಕೇಳುತ್ತಿರುವ ಪರವಾನಗಿ ಬಗ್ಗೆ ಅನುಮಾನ ಬಂತು. ಹಾಗಾಗಿ ಕಲ್ಲಿದ್ದಲು ಗಣಿಗಾರಿಕೆಗೆ ಮಾತ್ರ ಪರವಾನಗಿ ಮಂಜೂರು ಮಾಡಿತು. ಇದರಿಂದ ಅಸಮಾಧಾನಗೊಂಡ ಲ್ಯಾವೆಲ್ಲೆ ಸರ್ಕಾರದೊಡನೆ ಪತ್ರಸಮರ ಆರಂಭಿಸಿದ. ಕಲ್ಲಿದ್ದಲು ಪರವಾನಗಿ ಬದಲು 'ಖನಿಜ' ಗಣಿಗಾರಿಕೆಗೆ ಪರವಾನಗಿ ನೀಡಬೇಕೆಂದು